# ಹಣ ಎಲ್ಲಿ ಇಟ್ಟೆ?

**ಕೃಷ್ಣಮೂರ್ತಿ ಹನೂರು**

ಚಿತ್ರಗಳು: ಎಸ್‌ಎನ್‌ ಶ್ರೀಧರ್

ಒಂದು ದಿನ ಹನ್ನೊಂದು ಘಂಟೆಯ ಹೊತ್ತಿಗೆ ನಾನೂ ಎಸ್.ಎನ್. ಶ್ರೀಧರ್ (ನ್ಯೂಯಾರ್ಕ್‌ ಬಳಿಯ ಸ್ಟೋನಿ ಬ್ರೂಕ್ ವಿಶ್ವವಿದ್ಯಾಲಯದಲ್ಲಿ ಭಾಷಾಶಾಸ್ತ್ರ ಪ್ರಾಧ್ಯಾಪಕರು ಮತ್ತು ಭಾರತೀಯ ಅಧ್ಯಯನ ಕೇಂದ್ರದ ನಿರ್ದೇಶಕರು) ಸ್ಟೋನಿ ಬ್ರೂಕ್ ಹಳ್ಳಿಗೆ ಹತ್ತಿರವೇ ಇದ್ದ ಒಂದು ಪಾರ್ಕ್‌ಗೆ ಹೋದೆವು. ಅಮೆರಿಕದಲ್ಲಿ ಪಾರ್ಕುಗಳೆಂದರೆ ಅವು ಅರ್ಧ ಘಂಟೆಯಲ್ಲಿ ಸುತ್ತು ಹಾಕುವಂಥವಲ್ಲ! ಹಾಗೆ ಸ್ಟೋನಿ ಬ್ರೂಕ್‌ನ ಸನಿಹದಲ್ಲೇ ಇದ್ದ ಅವೆಲಾನ್ ವನಕ್ಕೆ ಹೋದೆವು. ಈ ಪಾರ್ಕನ್ನು ನಾನು ವನ ಎಂತಲೇ ಹೇಳುತ್ತಿದ್ದೇನೆ. ಏಕೆಂದರೆ, ಅದೊಂದು ಅರಣ್ಯಾವೃತ ಹಿನ್ನೀರ ಪ್ರದೇಶವಾಗಿದ್ದಿತು. ಆ ಅಟ್ಲಾಂಟಿಕ್ ಸಾಗರದ ಹಿನ್ನೀರ ಹಿಂಭಾಗದಲ್ಲಿ ನಾವು ಸಾಗಿದೆವು. ಮಧ್ಯಾಹ್ನವಾಗುತ್ತಿದ್ದುದರ ಕಾರಣ ಅಲ್ಲಿ ಜನ ಸಂಚಾರವೂ ಇರಲಿಲ್ಲ. ಅಮೆರಿಕದಲ್ಲಿ ದೊಡ್ಡ ದೊಡ್ಡ ಪಟ್ಟಣಗಳನ್ನು ಬಿಟ್ಟರೆ ಬೇರೆ ಬೇರೆಡೆಗಳಲ್ಲಿ ಸಾಮಾನ್ಯವಾಗಿ ಕಣ್ಣಿಗೆ ತೋರುತ್ತಿದ್ದುದು ಘನಮೌನವೇ!

ನಾವಿಬ್ಬರೇ ಉತ್ತರ ದಿಕ್ಕಿಗೆ ನಡೆದು ಒಂದು ಸಣ್ಣಗುಡ್ಡ ಏರಿದೆವು. ಗುಡ್ಡವಾದರೂ ನಡೆಯಲು ತುಂಬ ಅನುಕೂಲಕರ ದಾರಿಯಿದ್ದು ಆ ಗುಡ್ಡದ ತುದಿ ಭಾಗಕ್ಕೆ ಬರುವಲ್ಲಿ ಅಲ್ಲೇ ತಂತಿಯಲ್ಲಿ ಕಟ್ಟಿದ ಒಂದು ವೃತ್ತಾಕಾರವಿತ್ತು. ಅದರೊಳಗೆ ಯಾರೂ ನುಗ್ಗುವಂತಿರಲಿಲ್ಲ. ನುಗ್ಗುವ ಪ್ರಮೇಯವೇನೂ ಇರಲಿಲ್ಲ. ಆ ವೃತ್ತದೊಳಗೆ ನಮ್ಮಲ್ಲಿನ ಆಲದ ಮರದಂಥ ವಿಶಾಲ ವೃಕ್ಷವಿತ್ತು. ಅದರ ಕೆಳಗೆ ಕಲ್ಲು ಬಂಡೆಯೊಂದು ಸುಮಾರು ಎಂಟತ್ತು ಅಡಿ ಎತ್ತರಕ್ಕಿದ್ದಿತು. ಅಷ್ಟೇ ಸುತ್ತಳತೆ. ಇದನ್ನು ಇಷ್ಟು ವಿವರಿಸುತ್ತಿರುವುದರ ಕಾರಣವೆಂದರೆ ಬಂಡೆಯಲ್ಲಿ ಹುಡುಗನನ್ನು ಹೋಲುವ ಚಿತ್ರವಿತ್ತು. ಚಿತ್ರವೆಂದರೆ ಬರೆದದ್ದಲ್ಲ. ಲೋಹದ ತುಂಡುಗಳನ್ನು ಬಂಡೆಗೆ ಅಂಟಿಸಿದಂತೆ ಇಡಲಾಗಿತ್ತು. ಅಂದರೆ ಹುಡುಗನ ಚಿತ್ರ ಬಂಡೆಗೆ ಉಕ್ಕಿನ ಇಲ್ಲವೇ ಕಬ್ಬಿಣದ ತುಂಡುಗಳನ್ನು ಅಂಟಿಸಿ ಅದು ಅಸ್ಥಿಪಂಜರದಂತೆ ಕಾಣುತ್ತಿತ್ತು. ಮುಖ, ಕೈಕಾಲು, ದೇಹದ ಮಧ್ಯಭಾಗ ಎಂಬುದು ಗೊತ್ತಾಗುವುದೇ ಹೊರತು ಅವೆಲ್ಲ ಅಸ್ಥಿ ತುಂಬಿದಂತೆ ಸ್ಪಷ್ಟವಾಗಿರಲಿಲ್ಲ. ಕೊಂಚ ನಿಧಾನವಾಗಿ ನೋಡಿದರೆ ಹುಡುಗನೊಬ್ಬ ಆ ಬಂಡೆಯನ್ನು ಏರುವಂತೆ ಕಾಣುತ್ತದೆ. ಮುಖ ಕೂಡ ಮೇಲಕ್ಕೇರುವ ದೃಷ್ಟಿಯಲ್ಲಿದೆ. ಕೈಯಲ್ಲಿ ಬೆಂಕಿಯ ಪಂಜಿದೆ. ಶ್ರೀಧರ್ 'ಚಿತ್ರ ಹೇಗೆ ಕಾಣುತ್ತಿದೆ' ಎಂದರು.

ನಾನು ಚಿತ್ರವನ್ನು ಮತ್ತೊಂದು ಗಳಿಗೆ ನೋಡಿ, 'ಮಹತ್ವಾಕಾಂಕ್ಷೆಯ ಏರುಗತಿಯ ಮನುಷ್ಯನ ಚಿತ್ರದಂತಿದೆ' ಎಂದೆ.

'ಆಮೇಲೆ.'

'ಮುಖ ಮೇಲು ಮೇಲಕ್ಕೆ ಇದೆ ಸರಿ. ಆದರೆ, ಅದು ಬಂಡೆಗೆ ಅಂಟಿಕೊಂಡಂತಿದೆ. ಏರುಗತಿ ಕಷ್ಟವೇ.'

'ಆಮೇಲೆ.'

ಶ್ರೀಧರ್ ಹೀಗೆಂದಾಗ ಇಲ್ಲೇನೋ ಹೇಳಲಾಗದ ಸಂಗತಿ ಇರಬೇಕೆಂದು ಅಥವಾ ಈ ಬಂಡೆ,